ದಿನಾಂಕಃ 19-02-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ನಾನು ಬೇರೆಯವರ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತೇನೆ. ಘಟನೆ ದಿನ ನಾನು ಮಧ್ಯಾಹ್ನ 2.30-3.00 ಗಂಟರೆಗೆ ನನ್ನ ತೋಟದಲ್ಲಿದ್ದೆ. ನನ್ನ ಜೊತೆ ದುರ್ಗವ್ವ ಬಂದಿದ್ದಳು, ಅವಳನ್ನು ಸಾಕ್ಷಿಯನ್ನಾಗಿ ನಮೂದಿಸಿಲ್ಲ. ವಿಠ್ಠಲ ತೀರಿಕೊಂಡ ವಿಷಯ ನನಗೆ 3.30 ಗಂಟೆಗೆ ನನ್ನ ಅತ್ತೆ ಮನೆಯಲ್ಲಿ ಚೀರಾಡುತ್ತಿದ್ದಳು ಅದನ್ನು ಕೇಳಿ ನಾನು ಅಲ್ಲಿಗೆ ಹೋದೆ. ಆಗ ನಿನ್ನ ಮಾವ ಮತ್ತು ಮೈದುನನ್ನು ಯಾರೋ ಕಡಿದು ಹಾಕಿದ್ದಾರೆ ಬನ್ನಿ ಎಂದಳು. ನನ್ನ ಅತ್ತೆಗೆ ಸದರಿ ವಿಷಯವನ್ನು ನನ್ನ ಮಗಳು ರೇಖಾ ಮತ್ತು ಕಾಂಚನಾ ಇಬ್ಬರೂ ಮನೆಗೆ ಬಂದು ಹೇಳಿದ್ದಾರೆ. ನಂತರ ನಾನು, ನನ್ನ ಅತ್ತೆ ಇಬ್ಬರೂ ಸೇರಿ 4.00 ಗಂಟೆಗೆ ಸ್ಥಳಕ್ಕೆ ಹೋದೆವು. ನಾನು ಸ್ಥಳಕ್ಕೆ ಹೋದಾಗ 30-40 ಜನರು ಬಂದಿದ್ದರು. 7-8 ಜನ ಪೊಲೀಸರು ಸ್ಥಳದಲ್ಲಿದ್ದರು. ಚಾಸಾ-1 ಸಂಜೆ 6.00 ಗಂಟೆಗೆ ಸ್ಥಳಕ್ಕೆ ಬಂದರು. ಪೊಲೀಸರ ಮುಂದೆ ನನ್ನ ಮಗಳು ವಿಷಯ ತಿಳಿಸಿದ್ದಾಳೆ. ಪೊಲೀಸರ ಹುದ್ದೆ ನನಗೆ ಗೊತ್ತಾಗುವುದಿಲ್ಲ.

ಪೊಲೀಸರು ಶವಗಳನ್ನು ರಾತ್ರಿ 8.00 ಗಂಟೆಗೆ ತೆಗೆದುಕೊಂಡು ಹೋಗಿದ್ದಾರೆ. ಪೊಲೀಸರು ರೇಖಾ ಮತ್ತು ಕಾಂಚನಾರನ್ನು ವಿಚಾರಣೆ ಮಾಡಿದ್ದಾರೆ. ಆಗ ನನ್ನ ಹೇಳಿಕೆ ಪಡೆದಿಲ್ಲ.

ಮಲ್ಲೆಪ್ಪನನ್ನು ಕೊಲೆ ಮಾಡಿದ್ದರು ಅದಕ್ಕೆ ಪೋಲಿಸರು ನನ್ನನು ಸಾಕ್ಷಿ ಹೇಳಲು ಕರೆಸಿದ್ದರು, ವಿಠ್ಠಲ ಆಸ್ಪತ್ರೆಯ ಸಲುವಾಗಿ ನಮ್ಮ ಹತ್ತಿರ 30,000/- ರೂಗಳು ತೆಗೆದುಕೊಂಡು ಹೋಗಿದ್ದ, ಅವುಗಳನ್ನು ನಮಗೆ ಮರಳಿ ಕೊಡಲು ತೋಟದ ಮನೆಗೆ ಬಂದಿದ್ದ, ಆಗ ನನ್ನ ಅತ್ತೆ ಚಾ ಮಾಡಲು ಹೇಳಿದಳು, ಚಾ ಮಾಡಿ ಕೊಟ್ಟೆ ಆಗ ನನ್ನ ಅತ್ತೆ ಮೈದುನ, ಮಲ್ಲೆಪ್ಪ ಚಾ ಕುಡಿದರು, ನಂತರ ವಿಠ್ಠಲ ಮತ್ತು ಮಲ್ಲೆಪ್ಪ ಬೈಕ ಮೇಲೆ ಬೀಡಿ ತರಲು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಂತರ ನಾವು ತೋಟದಲ್ಲಿ ಕೆಲಸಕ್ಕೆ ಹೋದೆವು, ಆಗ ತೋಟದಲ್ಲಿ ನನ್ನ ಅತ್ತೆ ಚೀರಾಡುತ್ತಿದ್ದಳು, ನಂತರ ನಾವು ಓಡಿ ಬಂದು ವಿಚಾರಿಸಲಾಗಿ ಯಾರನ್ನು ಕಡಿದಿದ್ದಾರೆ ಎಂದು ಹೇಳಿದಳು, ನಾನು ಹೋಗುವಷ್ಟರಲ್ಲಿ ಮನೆಯಲ್ಲಿ ಎಲ್ಲರೂ ಹೋಗಿದ್ದರು, ನಂತರ ನಾನು ಹೋದೆ, ವಿಠ್ಠಲ ಇತನ ಶವ ಹುರದೊಡ್ಡಿ ನೀರಿನ ಕಾವಲಿಯಲ್ಲಿ ಬಿದ್ದಿತ್ತು, ಅವರ ಬಲಗಣ್ಣು ಹೋಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ ಹಾಗೂ ಬಲಭಾಗದ ಮೂಗು ಕತ್ತರಿಸಿತ್ತು, ತಲೆಯಿಂದ ಕುತ್ತಿಗೆಯವರೆಗೆ ಕಡಿದಿದ್ದರು, ನಂತರ ಮಲ್ಲೆಪ್ಪನ ಶವ ಕಲ್ಲೊಳಿಯಲ್ಲಿ ಬಿದ್ದಿತ್ತು, ಅವರ ಎಡಭಾಗದ ಕುತ್ತಿಗೆ ಕಡಿದಿದ್ದರು, ಸ್ವಲ್ಪ ಉಳಿದಿತ್ತು, ಎಡಗೈ ಅಂಗೈ ಕತ್ತರಿಸಿದ್ದರು

ರಕ್ತ ಸುಮಾರು ದೂರ ಹರಿದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಬಟ್ಟೆ ಹಾಗೂ ಚಪ್ಪಲುಗಳಿಗೆ ರಕ್ತದ ಕಲೆಯಾಗಿತ್ತು, ನಂತರ ರೇಖಾ ಕಾಂಚನಾ ಬಂದು 13 ಜನ ಸೇರಿ ಕೊಲೆ ಮಾಡಿದ್ದಾರೆ ಎಂದು ಹೇಳಿದರು, ಅದರಲ್ಲಿ 3-4 ಜನರ ಹೆಸರು ಗೊತ್ತಿದೆ ಎಂದು ಹೇಳಿದರು, ಅವರ ಹೆಸರು ರಾಜು, ಹನಮಂತ ಮಲ್ಲಪ್ಪ ಎಂದು ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೋಟರ್ ಸೈಕಲ್ ಮೇಲಿಂದ ಹೋಗುವಾಗ ಬಿದ್ದು ಅಪಘಾತದಲ್ಲಿ ಗಾಯ ಹೊಂದಿ ಮರಣ ಹೊಂದಿದ್ದರೂ ಸಹಿತ ಚಾಸಾ-1 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

19-02-2025.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

ದಿನಾಂಕಃ 19-02-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ಪೊಲೀಸರು ನನ್ನ ಹೇಳಿಕೆ ಪಡೆದಿದ್ದಾರೆ. ಘಟನೆಯಾಗಿ 10 ದಿನಗಳ ನಂತರ ಹೇಳಿಕೆ ಪಡೆದಿದ್ದಾರೆ. ನಂತರ ಮಲ್ಲಪ್ಪ ರಸ್ತೆಯಲ್ಲಿ ತಿರುಗಾಡುತ್ತಿದ್ದ. ಆಗ ನನಗೆ ಸಂಶಯ ಬಂತು. ನಂತರ ನಾನು ವಿಠ್ಠಲನಿಗೆ ಜಗಳ ಮುಗಿದಿದೆಯೋ ಇಲ್ಲವೋ ಎಂದು ಕೇಳಿದೆ. ಆಗ ಅವನು ನಾನು ಯಾರಿಗೆ ಹೊಡಿ ಬಡಿ ಮಾಡಿಲ್ಲ ಎಂದು ಹೇಳಿದ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ, ನಾನು ಹೇಳಿದ್ದೇನೆ ಪೊಲೀಸರು ಬರೆದುಕೊಂಡಿಲ್ಲ.

ಕಾಂಚನಾ ಮತ್ತು ರೇಖ ಎಂಬುವವರು ಘಟನೆಯನ್ನು ನೋಡಿದ ಬಗ್ಗೆ ಹೇಳಿದರು. ರೇಖಾ, ಕಾಂಚನಾ ನನ್ನ ಮೊಮ್ಮಕ್ಕಳು. ಇವರು ಕರಾಟೆ ಕಲಿಯಲು ಮುಧೋಳಕ್ಕೆ ಹೋಗಿದ್ದರು. ಅವರು ಬಂದು ಘಟನೆಯ ಬಗ್ಗೆ ನನಗೆ ಹೇಳಿದರು. ಘಟನಾ ಸ್ಥಳದ ಹರಿಯಲ್ಲಿ ಬಚ್ಚಿಟ್ಟುಕೊಂಡು ಕುಳಿತಿದ್ದರು. ನಂತರ ನಾವು ಓಡಿ ಬಂದು ವಿಚಾರಿಸಲಾಗಿ ದೊಡ್ಡಪ್ಪ ಮತ್ತು ಅಜ್ಜನನ್ನು ಕಡಿದು ಹೋದರು ಎಂದು ಹೇಳಿದರು. 30 ಜನ ಕೊಲೆ ಮಾಡಿ ಹೋಗಿದ್ದಾರೆ ಎಂದು ಹೇಳಿದರು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ, ನಾನು ಹೇಳಿದ್ದೇನೆ ಪೊಲೀಸರು ಬರೆದುಕೊಂಡಿಲ್ಲ.

ಘಟನೆ ಬಗ್ಗೆ ನನಗೆ ಮಧ್ಯಾಹ್ನ 2.30 ಗಂಟೆಗೆ ಗೊತ್ತಾಯಿತು. ನಾನು ನನ್ನ ಮನೆಯ ಮುಂದೆ ನಿಂತಿದ್ದೆ, ಯಾರೋ ಜನರು ಕಡಿದಿದ್ದಾರೆ ಎಂದು ಮಾತನಾಡಿಕೊಂಡು ಹೋದರು, ಆದರೆ ಅವರನ್ನು ನಾನು ನಿಲ್ಲಿಸಿ ಏನೂ ವಿಷಯವನ್ನು ಕೇಳಲಿಲ್ಲ, ಆಗ ನಾನು ನನ್ನ ಸೊಸೆಯನ್ನು ಕರೆದು ಅವಳೊಂದಿಗೆ 3.30 ಗಂಟೆಗೆ ಕಲ್ಲೊಳ್ಳಿ ರಸ್ತೆಗೆ ಹೋಗಿ ನೋಡಿದೆ. ಅಲ್ಲಿ ಸುಮಾರು 50 ರಿಂದ 60 ಜನರು ಸೇರಿದ್ದರು. ನಾನು ಸಾರ್ವಜನಿಕರನ್ನು ವಿಚಾರಣೆ ಮಾಡಿಲ್ಲ. ಸಾಯಂಕಾಲ 4.30 ಗಂಟೆವರೆಗೆ ಸ್ಥಳದಲ್ಲಿದ್ದೆ. ಶವಗಳನ್ನು 4.30 ಗಂಟೆಗೆ ಪೊಲೀಸರು ತೆಗೆದುಕೊಂಡು ಹೋದರು. ನಾನೂ ಸಹ ಪೊಲೀಸಠಾಣೆಗೆ ಪೊಲೀಸರೊಂದಿಗೆ 5.00 ಗಂಟೆಗೆ ಹೋದೆ. ಪೊಲೀಸಠಾಣೆಯಲ್ಲಿ ಪಿರ್ಯಾದಿ ನೀಡಿದ್ದಾರೆ, ಎಷ್ಟು ಗಂಟೆಗೆ ಕೊಟ್ಟಿದ್ದಾರೆ ಗೊತ್ತಿಲ್ಲ.

ವಿಠ್ಠಲ 30,000/- ರೂಗಳನ್ನು ತೆಗೆದುಕೊಂಡು ಹೋಗಿದ್ದ ಅದನ್ನು ಕೊಡಲು ಬಂದಿದ್ದ, ಆ ಸಮಯದಲ್ಲಿ ನಾವು ಟೀ ಮಾಡಿ ಕುಡಿದೆವು, ನಂತರ ಮಲ್ಲಪ್ಪ ರಸ್ತೆಯಲ್ಲಿ ತಿರುಗಾಡುತ್ತಿದ್ದ, ಆಗ ನನಗೆ ಸಂಶಯ ಬಂತು, ನಂತರ ನಾನು ವಿಠ್ಠಲನಿಗೆ ಜಗಳ ಮುಗಿದಿದೆಯೋ ಇಲ್ಲವೋ ಎಂದು ಕೇಳಿದೆ, ಆಗ ಅವನು ನಾನು ಯಾರಿಗೆ ಹೊಡಿ ಬಡಿ ಮಾಡಿಲ್ಲ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ

ಎನ್ನುವುದು ಸರಿಯಲ್ಲ. ಬೀಡಿ ತರಲು ನನ್ನ ಗಂಡ ಬೈಕ ಮೇಲೆ ವಿಠ್ಠಲ ಜೊತೆ ಊರಿಗೆ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಂತರ ನಾನು ಹೊಲದ ಕೆಲಸಕ್ಕೆ ಹೋದೆ, ನನ್ನ ಮನೆ ಹೊಲದಲ್ಲಿದೆ, ಬೈಕ ಮೇಲೆ ಹೋಗುವಾಗ ಕಾರ್ ಗಾಡಿ ಅಡ್ಡ ನಿಲ್ಲಿಸಿದರು, ವಿಠ್ಠಲನ ಬಲ ಮುಖದ ಮೇಲೆ ಹಾಗೂ ತಲೆಯ ಮೇಲೆ ಕಡಿದಿದ್ದರು, ಕುತ್ತಿಗೆ ಕಡಿದಿದ್ದರು ಹಾಗೂ ಮೂಗು ಹರಿದಿತ್ತು, ಕಣ್ಣು ಹೊರಗೆ ಬಂದಿತ್ತು. ಎಡಗೈನ ನಾಲ್ಕು ಬೆರಳಚ್ಚು ಕತ್ತರಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹೋದಾಗ ಶವ ಅಂಗಾತವಾಗಿ ಬಿದ್ದಿತ್ತು, ವಿಠ್ಠಲನ ಶವ ಕೆನಾಲ್ ನೀರಿನ ಕಾವಲಿಯಲ್ಲಿ ಬಿದ್ದಿತ್ತು, ರಸ್ತೆಯ ಮೇಲೆ ರಕ್ತ ಹರಿಯುತ್ತಿತ್ತು, ಸ್ಥಳದಲ್ಲಿ ಒಂದು ವಲ್ಲಿ, ಅಂಗಿ, ಬನಿಯನ್ ಟೋಪಿಗೆ ಶಲ್ಯ ಧರಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಒಂದು ಕಾರ್ ಗಾಡಿ ಮೂರು ಮೋಟಾರ ಸೈಕಲನ್ನು ತೆಗೆದುಕೊಂಡು ಕೆನಾಲ್ ಕಡೆಗೆ ಹೋದರು, ಕಾಂಚನಾ ಮತ್ತು ರೇಖ ಎಂಬುವವರು ಘಟನೆಯನ್ನು ನೋಡಿದ ಬಗ್ಗೆ ಹೇಳಿದರು, ರೇಖಾ, ಕಾಂಚನಾ ನನ್ನ ಮೊಮ್ಮಕ್ಕಳು, ಇವರು ಕರಾಟೆ ಕಲಿಯಲು ಮುಧೋಳಕ್ಕೆ ಹೋಗಿದ್ದರು, ಅವರು ಬಂದು ಘಟನೆಯ ಬಗ್ಗೆ ನನಗೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಘಟನಾ ಸ್ಥಳದ ಹರಿಯಲ್ಲಿ ಬಚ್ಚಿಟ್ಟುಕೊಂಡು ಕುಳಿತಿದ್ದರು, ನಂತರ ನಾವು ಓಡಿ ಬಂದು ವಿಚಾರಿಸಲಾಗಿ ದೊಡ್ಡಪ್ಪ ಮತ್ತು ಅಜ್ಜನನ್ನು ಕಡಿದು ಹೋದರು ಎಂದು ಹೇಳಿದರು, 30 ಜನ ಕೊಲೆ ಮಾಡಿ ಹೋಗಿದ್ದಾರೆ ಎಂದು ಹೇಳಿದರು, 4-5 ದಿನಗಳ ನಂತರ ಪೋಲಿಸರು ಬಂದಾಗ ಘಟನೆಯ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೋಟರ್ ಸೈಕಲ್ ಮೇಲಿಂದ ಹೋಗುವಾಗ ಬಿದ್ದು ಅಪಘಾತದಲ್ಲಿ ಗಾಯ ಹೊಂದಿ ಮರಣ ಹೊಂದಿದ್ದರೂ ಸಹಿತ ಚಾಸಾ-1 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

19-02-2025.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

ದಿನಾಂಕಃ 19-02-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ಆ ದಿನ ಬೆಳಗ್ಗೆ 10.00 ಗಂಟೆಗೆ ಪೊಲೀಸಠಾಣೆಗೆ ಹೋಗಿ ಸಿ.ಪಿ.ಐ ರವರಿಗೆ ಭೇಟಿಯಾಗಿದ್ದೇನೆ. ಪೊಲೀಸಠಾಣೆಯಲ್ಲಿ ಮಧ್ಯಾಹ್ನ 3.00 ಗಂಟೆವರೆಗೆ ಇದ್ದೆ. ಆ ದಿನ ನನ್ನ ಜೊತೆ ಮಹೇಶ, ನನ್ನ ತಾಯಿ, ಮಹಾಂತೇಶ ಹಾಗೂ ಇತರ 7-8 ಜನರು ಇದ್ದೆವು. ನಮ್ಮನ್ನು ಹೊರತುಪಡಿಸಿ ಶಿರೋಳದ ಬೇರೆ ಯಾವ ವ್ಯಕ್ತಿಗಳೂ ಇರಲಿಲ್ಲ. ಆ ದಿನ ಯಾವ ನಂಬರದಿಂದ ಪೋನ ಬಂತು ಅಂತಾ ನಂಬರು ಹೇಳಲು ಬರುವುದಿಲ್ಲ, ಆದರೆ ಅವನ ಹೆಸರು ದಸ್ತಗಿರಸಾಬ ಇರುತ್ತದೆ. ದಸ್ತಗಿರಿಸಾಬ ಪೋನ್ ಮಾಡಿ ಅಪಘಾತವಾಗಿದೆ ಎಂದು ಹೇಳಿದ್ದ. 5-10 ನಿಮಿಷದ ನಂತರ ದಸ್ತಗಿರಿಸಾಬ ಪೋನ್ ಮಾಡಿ ನಿಮ್ಮ ಅಣ್ಣ ಮತ್ತು ಚಿಕ್ಕಪ್ಪನನ್ನು ಕಡಿದು ಹಾಕಿದ್ದಾರೆ ಎಂದು ಹೇಳಿದ. ದಸ್ತಗಿರಿಸಾಬ ಆರೋಪಿತರು ಕಡಿದು ಹಾಕಿದನ್ನು ನೋಡಿಲ್ಲ, ಆದರೆ ಅಲ್ಲಿ ಬಿದ್ದಿದ್ದಾರೆ ಎಂದು ಪೋನ್ ಮಾಡಿದ. ಠಾಣೆಯಲ್ಲಿದ್ದ ಪಿ.ಎಸ್.ಐ ರವರಿಗೆ ಕರೆದರೂ ಬರಲಿಲ್ಲ ಈಗ ನನ್ನ ಅಣ್ಣ ಮತ್ತು ಚಿಕ್ಕಪ್ಪನನ್ನು ಕೊಲೆ ಮಾಡಿದ್ದಾರೆ ಎಂದು ಹೇಳಿದೆ. ಆಗ ಪಿ.ಎಸ್.ಐ ನನ್ನ ಜೊತೆ ಊರಿಗೆ ಬರಲು 4 ಕಿ.ಮೀ ಬಂದು ಮರಳಿ ವಾಪಸ್ಸು ಠಾಣೆಗೆ ಹೋದರು. ನಂತರ ಪೊಲೀಸರನ್ನು ಕರೆದುಕೊಂಡು ಮಧ್ಯಾಹ್ನ 3.20 ಅಥವಾ 3.30 ಗಂಟೆಗೆ 20 ಪೊಲೀಸ ವ್ಯಾನಗಳಲ್ಲಿ ಸುಮಾರು ಲೆಕ್ಕವಿಲ್ಲದಷ್ಟು ಪೊಲೀಸರು ಬಂದರು. ಅದರಲ್ಲಿ ಪಿ.ಎಸ್.ಐ ಮತ್ತು ಸಿ.ಪಿ.ಐ ಇದ್ದರು.

ದಸ್ತಗಿರಸಾಬ ನನಗೆ 3.20 ಅಥವಾ 3.30 ಗಂಟೆಗೆ ಫೋನ್ ಮಾಡಿ ಕಡಿದು ಹಾಕಿದ್ದಾರೆ ಎಂದು ಹೇಳಿದ. ಠಾಣೆಯಿಂದ 20 ನಿಮಿಷದಲ್ಲಿ ನಾವು ಘಟನಾ ಸ್ಥಳಕ್ಕೆ ಹೋದೆವು. ಸ್ಥಳಕ್ಕೆ ಹೋದಾಗ ಸುಮಾರು 200-300 ಜನರು ಸೇರಿದ್ದರು. ಊರ ಜನರಲ್ಲದೇ ಸುತ್ತ ಮುತ್ತ ಹಳ್ಳಿಯ ಜನರೆಲ್ಲರೂ ಬಂದು ನೋಡುತ್ತಿದ್ದರು. ರೇಣುಕಾಳನ್ನು ನಾನು ಸ್ಥಳದಲ್ಲಿಯೇ ಮಾತನಾಡಿಸಿದ್ದೇನೆ.

ಸ್ಥಳದಲ್ಲಿ 1 ನೇ ಆರೋಪಿಗೆ ಸೇರಿದ ಕಾರಿನ ಚಾವಿ ಹಾಗೂ ನನಗೆ ಸೇರಿದ ಸೈಕಲ್ ಮೋಟರ್ ಚಾವಿ ಬಿದ್ದಿತ್ತು. 3 ಜೊತೆ ಚಪ್ಪಲನಲ್ಲಿ ಒಂದು ಜೊತೆ ನನ್ನ ಚಿಕ್ಕಪ್ಪನ ಚಪ್ಪಲಿ ಹಾಗೂ ಇನ್ನೊಂದು ಜೊತೆ ನನ್ನ ಅಣ್ಣನ ಚಪ್ಪಲಿ ಇತ್ತು. ಉಳಿದ ಒಂದು ಜೊತೆ ಯಾರಿಗೆ ಸೇರಿದ್ದು ಗೊತ್ತಿಲ್ಲ. ನನ್ನ ಚಿಕ್ಕಪ್ಪನಿಗೆ ಸೇರಿದ ಹವಾಯಿ ಚಪ್ಪಲಿ, ನನ್ನ ಅಣ್ಣನಿಗೆ ಸೇರಿದ ಕಾಲ್ಮರಿ ಚಪ್ಪಲಿ ಇತ್ತು. ಇನ್ನೊಂದು ಜೊತೆ ಕಾಲ್ಮರಿ ಚಪ್ಪಲಿ ಇದ್ದವು.

ನಾನು ಸ್ಥಳಕ್ಕೆ ಹೋದ 10-15 ನಿಮಿಷದಲ್ಲಿ ಪೊಲೀಸರು ಬಂದರು. ಸ್ಥಳದಲ್ಲಿದ್ದ ಬೈಕ ಚಾವಿ ಮತ್ತು ಕಾರ ಚಾವಿ ನನ್ನ ಸಮಕ್ಷಮ 3.30 ಗಂಟೆಗೆ ತೆಗೆದುಕೊಂಡಿದ್ದಾರೆ. ಪೊಲೀಸರ ಮುಂದೆ ಸ್ಥಳದಲ್ಲಿಯೇ ರೇಣುಕಾ ಹೇಳಿದಂತ ವಿಷಯ ಹೇಳಿದ್ದೇನೆ. ಆದರೆ ಪೊಲೀಸರು ಸ್ಥಳದಲ್ಲಿ ಪಿರ್ಯಾದಿ ಬರೆದುಕೊಳ್ಳಲಿಲ್ಲ. ಪೊಲೀಸರಿಗೆ ಪಿರ್ಯಾದಿ ಬರೆದುಕೊಳ್ಳುವಂತೆ ನಾನು ಹೇಳಲಿಲ್ಲ.

ನನ್ನ ಪಿರ್ಯಾದಿಯಲ್ಲಿ ಶಂಕರ ಗುಡದಿನ್ನಿ, ರಾಜು ಕಡತ, ಕಿರಣ ನಾಗರೆಡ್ಡಿ, ಕಾಡು ನಾಗರೆಡ್ಡಿ ಇವರ ಹೆಸರುಗಳು ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಮೇ ತಿಂಗಳಲ್ಲಿ ನನ್ನ ಹಾಗೂ ನನ್ನ 2 ಜನ ಸಹೋದರರ ಮನೆಗಳನ್ನು ಮತ್ತು ಟ್ರ್ಯಾಕ್ಟರಗಳನ್ನು ಧ್ವಂಸ ಮಾಡಿದರು ಹಾಗೂ ನನ್ನ ತಲೆಗೆ ತಲ್ವಾರನಿಂದ ಹೊಡೆದರು ಆ ಬಗ್ಗೆ ಕೇಸು ಹಾಕಿದ್ದೇನೆ ಎಂಬ ವಿಷಯವನ್ನು ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ನಾನು ಮೊದಲು ಮುಧೋಳ ಸಿ.ಪಿ.ಐ ಸಾಹೇಬರ ಹತ್ತಿರ ಹೋದೆ. ಅವರು ಮಹೇಶ ಗೌಡನಿಗೆ ಫೋನ ಮಾಡಿದರು, ನಾನು ಆ ದಿನ ನಮ್ಮ ಕುಟುಂಬಕ್ಕೆ ಜೀವ ಬೆದರಿಕೆ ಇದೆ ಅಂತಾ ಹೇಳಲು ಹೋಗಿದ್ದೆ, ನಾನು ಪಿ.ಎಸ್.ಐ ರವರಿಗೆ ಅವರು ಕೊಲೆ ಮಾಡವ ಹಂತದಲ್ಲಿದ್ದಾರೆ ಅಂತಾ ಹೇಳಿದೆ, ಅದಕೆ ಪಿ.ಎಸ್.ಐ ರವರು ನಿಮ್ಮನ್ನು ಬದನೆಕಾಯಿ ಮಾಡಿದ್ದಾರೆ ಅಂತಾ ಹೇಳಿದರು ಎಂಬ ವಿಷಯವನ್ನು ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎನ್ನುವುದು ಸರಿಯಲ್ಲ.

ಘಟನಾ ಸ್ಥಳದಲ್ಲಿ ಮದ್ಯಾಹ್ನ 3.30 ರಿಂದ 8.30 ಗಂಟೆವರೆಗೆ ಇದ್ದೆವು. ಆ ಸಮಯದಲ್ಲಿ ಡಿ.ವಾಯ್.ಎಸ್.ಪಿ, ಎಸ್.ಪಿ ರವರು ಸ್ಥಳಕ್ಕೆ ಬಂದಿದ್ದರು. ಆ ದಿನ ಪೊಲೀಸರು ರೇಣುಕಾ ಇವಳನ್ನು ವಿಚಾರಣೆ ಮಾಡಿಲ್ಲ. ಆದಿನ ರೇಣುಕಾಳನ್ನು ಡಿ.ವಾಯ್.ಎಸ್.ಪಿ, ಎಸ್.ಪಿ ರವರಿಗೆ ಪ್ರತ್ಯಕ್ಷ ಸಾಕ್ಷಿ ಅಂತಾ ಭೇಟಿ ಮಾಡಿಸಿದೆ

ಆದರೆ ಅವರು ರೇಣುಕಾಳ ಹೇಳಿಕೆ ಪಡೆಯಲಿಲ್ಲ. ರಾತ್ರಿ 8.30 ಗಂಟೆಗೆ ಮುಧೋಳ ಪೊಲೀಸಠಾಣೆಗೆ ಹೋದೆ. ರಾತ್ರಿ 1.00 ಗಂಟೆವರೆಗೆ ಪಿರ್ಯಾದಿ ಬರೆದು ನೀಡಿದ್ದೇನೆ.

ಒಕ್ಕಲುತನ ನನ್ನ ಉದ್ಯೋಗ. ನನ್ನ ಹಾಗೂ ಕುಟುಂಬ ಸದಸ್ಯರ ಮೇಲೆ ಅಬಕಾರಿ ಹಾಗೂ ಕೆ.ಪಿ ಆ್ಯಕ್ಟ ನಲ್ಲಿ ಕೇಸುಗಳಿವೆ ಎನ್ನುವುದು ನಿಜ. ಮುತ್ತಪ್ಪನ ಕೊಲೆ ಪ್ರಕರಣದಲ್ಲಿ ನಾನು ಆರೋಪಿಯಾಗಿದ್ದು ಅದರಲ್ಲಿ ನಿರಪರಾಧಿಯಾಗಿದ್ದೇನೆ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಗೌರವಕ್ಕೆ ಧಕ್ಕೆಯಾಗುತ್ತದೆ ಆದ್ದರಿಂದ ಇಂತಹ ಪ್ರಶ್ನೆಗಳು ಈ ಕೇಸಗೆ ಸಂಬಂಧವಿಲ್ಲದೇ ಇರುವುದರಿಂದ ಕೇಳಬಾರದು ಎಂದು ಆಕ್ಷೇಪಣೆ ಎತ್ತಿರುತ್ತಾರೆ. ಆರೋಪಿ ಪರ ವಕೀಲರು ಸದರಿ ಪ್ರಶ್ನೆಗಳು ಈ ಕೇಸಗೆ ಸುಸಂಬದ್ಧವಾಗಿದ್ದು ಅವಶ್ಯಕತೆ ಇದೆ ಎಂದು ಹೇಳಿರುತ್ತಾರೆ. ಆದ್ದರಿಂದ ಸುನಾವಣೆಗೆ ಮುಂದೂಡಲಾಯಿತು. ವಿಶೇಷ ಸರ್ಕಾರಿ ಅಭಿಯೋಜಕರು ಸುನಾವಣೆಗಾಗಿ ದಿನಾಂಕಃ 25-02-2025 ರಂದು ವೇಳೆ ಕೇಳಿದ್ದರಿಂದ ಮುಂದೂಡಲಾಯಿತು. ಆದ್ದರಿಂದ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

19-02-2025.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.